ಪ್ರಬಂಧ

# ಒದ್ದಾಡಿ ಬೇಕೆಂದು



**ಈರಪ್ಪ ಎಂ. ಕಂಬಳಿ**

ಕಲೆ: ವಿಶ್ವನಾಥ್ ಎ.ಎಸ್.

**ಇರುವುದೆಲ್ಲವ ಬಿಟ್ಟು ಇರದುದರೆಡೆಗೆ**
**ತುಡಿವುದೇ ಜೀವನ**

**-ಎಂ.ಗೋಪಾಲಕೃಷ್ಣ ಅಡಿಗ**

ವಿಪರೀತ ವೇಗ ಒದಗಿದ ಇವತ್ತಿನ ಈ ಆಧುನಿಕ ನಾಗರಿಕ ಜಗತ್ತಿನಲ್ಲಿ ನಾನೂ ಹಿಂದೆ ಬೀಳಬಾರದೆಂದುಕೊಂಡು ಅಪ್‌ಡೇಟ್ ಆಗಲು ತುಸು ದುಬಾರಿಯ ಮೊಬೈಲು ಕೊಂಡು ಕೈಯಲ್ಲಿ ಹಿಡಿದಿದ್ದೇ ಬಂತು ನೋಡಿರಿ. ಕುರಿ ಕೇಳಿ ಮಸಾಲೆ ಅರೆಯುತ್ತಾರೆಯೆ? ನನ್ನ ಅನುಮತಿಯಿಲ್ಲದೆ ಹತ್ತಾರು ಗುಂಪಿನಲ್ಲಿ ನನ್ನನ್ನು ಸೇರಿಸಿಕೊಂಡು ಬಿಟ್ಟದ್ದರು ಅಸಂಖ್ಯಾತ ನೆಟ್ಟಿಗರು. ನನ್ನ ಈ ಸ್ಮಾರ್ಟ್ ಫೋನಿಗೆ ರಸಕ್ಕಿಂತ ಕಸವೇ ಜಾಸ್ತಿ ಬಂದು ಬೀಳುವುದಕ್ಕೆ ಈಗ ತಲೆಯ ಮೇಲೆ ಕೈಹೊತ್ತು ಕೂತಿದ್ದೇನೆ, ದಾರಿಗಾಣದೆ. ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಯೊಳಗೆ ಬಿಟ್ಟುಕೊಂಡಂತೇ ಥೇಟು! ಇಷ್ಟೆಲ್ಲ ಪೀಠಿಕೆ ಯಾಕೆ ಹಾಕಿದೆನೆಂದರೆ, ಮೊನ್ನೆ ವಾಟ್ಸ್‌ಆಪ್‌ನಲ್ಲಿ ವೈರಲ್ ಆದ ವೀಡಿಯೊ ಒಂದನ್ನು ನೋಡಿದೆ. ಕಾವಿ ತೊಟ್ಟ ಕಿರಿ ಮಠಾದೀಶ ಒಂದು ಮಾತನಾಡುತ್ತಿತ್ತು. ಪಕ್ಕದಲ್ಲಿಯೇ ಮಾಮು (ಮಾಜಿ ಮುಖ್ಯಮಂತ್ರಿ) ಒಂದು ಅದಕ್ಕೆ ಸೈಯೆನ್ನುವಂತೆ ತಲೆ ಆಡಿಸುತ್ತಿದ್ದದ್ದು ತಮಾಷೆಯಾಗಿತ್ತು. 'ನಮ್ಮೋರು, ಅವರು ಯಾವ ಪಕ್ಷದಲ್ಲಿದ್ದರು ಸರಿ. ಅವರಿಗೆ ನೀವು ಪೆನ್ನು ಕೊಡಬೇಕು. ಅವರು ಈ ರಾಜ್ಯದ ಅಧಿಕಾರ ಗದ್ದುಗೆಯೇರಬೇಕು' ಹೀಗೇ ಮುಂದುವರೆದಿತ್ತು ಆ ಕಾವಿಮರಿಯ ವಾಗ್ಝರಿ. ಸುಳ್ಳು ಸೃಷ್ಟಿಯೇ ವಿಜೃಂಬಿಸುತ್ತಿರುವ ಈ ಕಂಪ್ಯೂಟರ್ ಯುಗದಲ್ಲಿ ಎಲ್ಲ ಆಯೋಮಯ.

* * *

ಜೀವನದಲ್ಲಿ ಪುಸ್ತಕ ಮತ್ತು ಪೆನ್ನು ಬಿಟ್ಟರೆ ಇನ್ನೇನೂ ಗಳಿಸಲಿಲ್ಲ ನಾನು. ಅವೇ ಸಕಲ ಸುಖ-ಸವಲತ್ತು, ಸ್ಥಾನ-ಮಾನ ನೀಡಿ ಕಾಪಾಡುತ್ತಿರಬೇಕಾದರೆ ಇನ್ನೇನು ಬೇಕು ನನಗೆ. ಸ್ವಯಂರೂಪಿ ಸರಸ್ವತೀ ಪುತ್ರ. ಬಾಲ್ಯದಲ್ಲಿ ಭಯಂಕರ ಓದುವ ಹಸಿವಿತ್ತು; ಕೊಳ್ಳುವ ಸಾಮರ್ಥ್ಯ ಇರಲಿಲ್ಲ. ಈಗ ಕೊಳ್ಳುವ ಸಾಮರ್ಥ್ಯವಿದೆ; ಎಷ್ಟೋ ಬಾರಿ ಪುಸ್ತಕಗಳೇ ಹುಡುಕಿಕೊಂಡು ಬರುತ್ತವೆ-ಓದುವ ಕಸುವಿಲ್ಲ. ಇಂಥ ವಿರೋಧಾಭಾಸಗಳ